ಫಲಾನುಭವಿಗಳ ಸಂಖ್ಯೆ 12.25 ಲಕ್ಷ

ಆ) ಯೋಜನೆಯ ಜಾರಿಯಲ್ಲಿ ವಿಳಂಬ ಮತ್ತು ಗೊಂದಲಗಳು ಉಂಟಾಗಲು ಕಾರಣಗಳೇನು?

ಯೋಜನೆಯ ಜಾರಿಯಲ್ಲಿ ಯಾವುದೇ ವಿಳಂಬ ಮತ್ತು ಗೊಂದಲಗಳು ಉಂಟಾಗಿರುವುದಿಲ್ಲ.

ಇ) ಹಾಗಿದ್ದಲ್ಲಿ, ಅವುಗಳನ್ನು ಪರಿಹರಿಸಿ ಅರ್ಹ ಕೃಷಿ ನೇಕಾರ ಮೀನುಗಾರರಿಗೆ ಅನುಕೂಲ ಮಾಡಿಕೊಡಲು ಸರ್ಕಾರ ಕ್ರಮಕೈಗೊಳ್ಳುವುದೇ?

ಉದ್ಭವಿಸುವುದಿಲ್ಲ.

ಈ) ಈ ಯೋಜನೆ ಅನುಷ್ಠಾನಕ್ಕಾಗಿ ಸರ್ಕಾರ ಭರಿಸಿರುವ ಮೊತ್ತದ ವಿವರಗಳೇನು?

ಸರ್ಕಾರ ಭರಿಸಿರುವ ಮೊತ್ತ ರೂ.1836.77 ಕೋಟಿಗಳು.

293 ಶ್ರೀ.ಜಯಚಂದ್ರ ಟಿ.ಬಿ. (ಶಿರಾ)

ಹೆಚ್.ಹಾಲಪ್ಪ(ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು)

ಅ) ರಾಜ್ಯದಲ್ಲಿ ಇಲ್ಲಿಯವರೆಗೂ ನೀಡಿರುವ ಖಾಯಂ ಹಾಗೂ ತಾತ್ಕಾಲಿಕ ಪಡಿತರ ಚೀಟಿಗಳ ಸಂಖ್ಯೆ ಎಷ್ಟು;

ರಾಜ್ಯದಲ್ಲಿ ಜೂನ್ 2009ರ ಮಾಹೆಯ ಅಂತ್ಯದವರೆಗೆ ಎಎವೈ, ಬಿಪಿಎಲ್, ನೆಮ್ಮದಿ ಮತ್ತು ಎಪಿಎಲ್ ಸೇರಿದಂತೆ ಒಟ್ಟು 1,59,66,366 ತಾತ್ಕಾಲಿಕ ಪಡಿತರ ಚೀಟಿಗಳು ವಿತರಿಸಲಾಗಿದ್ದು, ಇದರಲ್ಲಿ 5,90,363 ಪಡಿತರ ಚೀಟಿದಾರರಿಗೆ ಖಾಯಂ ಪಡಿತರ ಚೀಟಿಗಳು ವಿತರಿಸಲಾಗಿದೆ.

ಆ) ಪಡಿತರದಾರರಿಗೆ ನೀಡುತ್ತಿರುವ ಪಡಿತರ ಸಾಮಗ್ರಿಗಳು ಯಾವುವು;

ಪಡಿತರದಾರರಿಗೆ ಅಕ್ಕಿ, ಗೋಧಿ/ರಾಗಿ, ಸಕ್ಕರೆ ಮತ್ತು ಸೀಮೆಎಣ್ಣೆಯನ್ನು ವಿತರಿಸಲಾಗುತ್ತಿದೆ.

ಇ) ಪಡಿತರದಾರರಿಗೆ ನೀಡುತ್ತಿರುವ ಯೂನಿಟ್ ಪದ್ಧತಿಯನ್ನು ರದ್ದುಮಾಡಿ ಪ್ರತಿ ಪಡಿತರ ಚೀಟಿದಾರರಿಗೆ ತಲಾ 35 ಕೆ.ಜಿ. ಅಕ್ಕಿಯನ್ನು ರೂ.3.00 ರಂತೆ ನೀಡುವ ಯೀಜನೆ ಸರ್ಕಾರಕ್ಕಿದೆಯೇ?

ಇಲ್ಲ.